ಇದಕ್ಕೆ ಒಬ್ಬರೂ ಕೂಡ ಬದ್ದರಾಗಿಲ್ಲ. ಇವತ್ತಿನದಿವಸ ಅಧಿಕಾರಿಗಳು ಏಷಾರಾಮಿ ಜೀವನ ನಡೆಸುತ್ತಿದ್ದಾರೆ. ಈಗ ಕೊಟ್ಟಿರುವ ಮಾಹಿತಿಗಳೆಲ್ಲಾ ತಪ್ಪು ಮತ್ತೆ ಸುಳ್ಳು ಮಾಹಿತಿ. ನಾನು ಆಡಳಿತ ಪಕ್ಷದಲ್ಲಿರುವುದರಿಂದ ನಾನು ಸದನದ ಬಾವಿಗೆ ಬರುತ್ತಿಲ್ಲ. ಆದರೂ ಕೂಡ ಈ ಉತ್ತರವನ್ನು ಬಹಿಷ್ಕರಿಸಿ ಸದನದ ಹೊರಕ್ಕೆ ಹೋಗುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ಶಂಕರಲಿಂಗೇಗೌಡರವರು ಸಭಾತ್ಯಾಗ ಮಾಡಿ ಸದನದಿಂದ ಹೊರಗೆ ಹೋದರು)

ಕೆ.ಜಿ.ಎಫ್. ನಗರದಲ್ಲಿ ಒಳಚರಂಡಿ ವ್ಯವಸ್ಥೆ

149 (671) ಶ್ರೀ ರಾಜೇಂದ್ರನ್ ಎಸ್. (ಕೆ.ಜಿ.ಎಫ್): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಧಯವಿಟ್ಟು ಉತ್ತರಿಸುವರೇ?

1. ಕೆ.ಜಿ.ಎಫ್. ನಗರವನ್ನು ಒಳಚರಂಡಿ ವ್ಯವಸ್ಥೆಗೆ ಒಳಪಡಿಸಲಾಗಿದೆಯೇ;

2. ಒಳಪಡಿಸದಿರಲು ಕಾರಣಗಳೇನು;

3. ಈ ನಗರವನ್ನು ಯು.ಜಿ.ಡಿ.ಗೆ ಒದಗಿಸಲು ಬೇಕಾಗಿರುವ ಹಣವೆಷ್ಟು; ಯಾವಾಗ ಒದಗಿಸಲಾಗುವುದು?

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು):

1. ಇಲ್ಲ.

2. ಈ ಬಗ್ಗೆ ಸರ್ವೆ ಕಾರ್ಯ ಕೈಗೊಳ್ಳಬೇಕಾಗಿದ್ದು, ಈ ನಿಟ್ಟಿನಲ್ಲಿ ಸರ್ವೆ ಅಂದಾಜು ಪಟ್ಟಿಯನ್ನು 9 ಲಕ್ಷ ರೂ.ಗಳಿಗೆ ತಯಾರಿಸಿ ಕೆ.ಜಿ.ಎಫ್ ನಗರ ಸಭೆಯವರಿಗೆ ದಿನಾಂಕ 29.12.2004ರಂದು ಕಳುಹಿಸಿದ್ದು, ಅವರು ಸದರಿ ಅಂದಾಜು ಮೊತ್ತವನ್ನು ಭರಿಸಿದ ಕೂಡಲೇ ಸರ್ವೆ ಕಾರ್ಯ ಕೈಗೊಂಡು ಒಳಚರಂಡಿ ಯೋಜನೆಯನ್ನು ರೂಪಿಸಲಾಗುವುದು.

3. ಸರ್ವೆ ಕಾರ್ಯ ಕೈಗೊಂಡು ಒಳಚರಂಡಿ ಯೋಜನೆಯನ್ನು ಅಂದಾಜು ತಯಾರಿಸಿದ ನಂತರ ಯು.ಜಿ.ಡಿ. ಅಂದಾಜು ವೆಚ್ಚ ತಿಳಿದುರುತ್ತದೆ.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗಳಿಗೆ ``Reply by Hon`ble Chief Minister'' ಎಂದು ಕೊಟ್ಟಿದ್ದಾರೆ. ಆದ್ದರಿಂದ, ಇದಕ್ಕೆ ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಲ್ಲವೇ? ಅವರು ಇಲ್ಲಿರುವುದರಿಂದ ಅವರೇ ಉತ್ತರ ಕೊಡಬೇಕು. ಆದರೆ, ಅದನ್ನು ನೋಡಿಲ್ಲ. ಈ ಪ್ರಶ್ನೆಯನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಕೇಳಿದ್ದು, ಈ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲದೇ ಇರುವುದರಿಂದ ಈ ಪ್ರಶ್ನೆಗೆ ``Reply by Hon`ble Deputy Chief Minister''—ಎಂದು ಗಂಭೀರವಾಗಿ ಕೊಟ್ಟಿದ್ದಾರೆ. But where is he ಮಾನ್ಯ ಪ್ರಕಾಶ್‌ರವರು ಬಹಳ ಇಂಟಲಿಜೆಂಟ್ ಆಗಿ ಉತ್ತರ ಕೊಡುತ್ತೀರೆಂದು ನಮಗೆ ಗೊತ್ತಿದೆ. ಎಷ್ಟು ಪ್ರಶ್ನೆಗಳು ಇದ್ದರೂ ಕೂಡ ಉತ್ತರ ಕೊಡುತ್ತೀರಿ. You are a very intelligent person. I am getting answers from him definitely, I am

happy. ಸಾರ್, ಈಗ ನಿಮ್ಮದು ಪ್ರಶ್ನೆ ಇದೆ. ತಾವು ಹೊರಗಡೆ ಹೋಗಬಾರದೆಂದು ಕಾರ್ಯದರ್ಶಿಗಳು ಅವರ ಗಮನಕ್ಕೆ ತರಬೇಕಾಗಿತ್ತಲ್ಲವೇ? That shows the Officers` inefficiency. ನನ್ನ ಪ್ರಶ್ನೆ ಏನೆಂದರೆ, Whether Underground Drainage System would be constructed in K.G.F. City`` ಎಂದು ಕೇಳಿದ್ದೇನೆ. "ನೋ" ಎಂದು ಇದಕ್ಕೆ ಉತ್ತರ ಕೊಟ್ಟಿದ್ದಾರೆ. ಗ್ರೇಡ್–(2) ಸಿಟಿಗಳಲ್ಲಾ ಯು.ಜಿ.ಡಿ. ಪ್ರೋಗ್ರಾಮ್ ಇರಬೇಕೆಂದು ಸರ್ಕಾರ ಹೇಳುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಸರ್ಕಾರದ ಗೆಜೆಟ್ ನೋಟಿಫಿಕೇಶನ್ ಕೂಡ ಇದೆ. ಏಕೆ ಮಾಡಿಲ್ಲವೆರಿದು ಕೇಳಿದರೆ "ನೋ" ಎಂದು ಉತ್ತರ ಕೊಡುತ್ತಾರೆ. ಈ ಕೆಲಸ ಮಾಡುತ್ತೇವೆ ಅಥವಾ ಬೇಗ ಮಾಡುತ್ತೇವೆ ಅಥವಾ ಮಾಡೋಣ ಅಥವಾ ನೋಡೋಣ ಎಂದು ಉತ್ತರ ಕೊಡತಕ್ಕಂಥದ್ದು ನಮ್ಮ ಸ್ಲೋಗನ್ ಆಗಿದೆ. ಕೊನೇಪಕ್ಷ ಈ ರೀತಿಯಾಗಿ ಆದರೂ ಉತ್ತರ ಕೊಡಬೇಕಾಗಿತ್ತಲ್ಲವೇ? ಆದರೆ, ಈ ರೀತಿಯಾಗಿ ಕೂಡ ಉತ್ತರ ಕೊಟ್ಟಿಲ್ಲ. ನನ್ನ ಎರಡನೇ ಪ್ರಶ್ನೆ ಏನೆಂದರೆ `` The reasons for not constructing the same." ಇದಕ್ಕೆ ಉತ್ತರ ಕೊಡುತ್ತಾರೆಂದರೆ" ಈ ಬಗ್ಗೆ ಸರ್ವೆ ಕಾರ್ಯ ಕೈಗೊಳ್ಳಬೇಕಾಗಿದ್ದು, ಈ ನಿಟ್ಟಿನಲ್ಲಿ ಸರ್ವೆ ಅಂದಾಜು ಪಟ್ಟಿಯನ್ನು 9 ಲಕ್ಷ ರೂ.ಗಳಿಗೆ ತಯಾರಿಸಿ ಕೆಜಿಎಫ್ ನಗರ ಸಭೆಯವರಿಗೆ ದಿನಾಂಕ 29.12.2004ರಂದು ಕಳುಹಿಸಿದ್ದು, ಅವರು ಸದರಿ ಅಂದಾಜು ಮೊತ್ತವನ್ನು ಭರಿಸಿದ ಕೂಡಲೇ ಸರ್ವೆ ಕಾರ್ಯ ಕೈಗೊಂಡು ಒಳಚರಂಡಿ ಯೋಜನೆಯನ್ನು ರೂಪಿಸಲಾಗುವುದೆಂದು ಉತ್ತರ ಕೊಟ್ಟಿದ್ದಾರೆ.

ಈ ಸರ್ವೆ ಕೆಲಸವನ್ನು ಯಾರು ಮಾಡಬೇಕು? ಶಾಸಕನಾಗಿರತಕ್ಕಂಥ ನಾನು ಹೋಗಿ ಮಾಡಬೇಕೇ ಅಥವಾ ಸಿಟಿ ಮುನಿಸಿಪಾಲಿಟಿಯವರು ಮಾಡಬೇಕೇ? ಸಿಟಿ ಮುನಿಸಿಪಾಲಿಟಿಯವರು ಮಾಡದೆ ಇದ್ದರೆ ಅಧಿಕಾರಿಗಳು ಏನು ಮಾಡಬೇಕು? They have no responsibility at all ಆದರೆ, ಬರೀ ಮಾತಿನಲ್ಲಿ ಸಿಟಿ ಕಡೆ ಎಲ್ಲಾ ಈ ರೀತಿಯಾಗಿರಬೇಕೆಂದು ಹೇಳುತ್ತಾರಪ್ಪೆ. ಗ್ರೇಡ್–2 ಸಿಟಿಗಳಲ್ಲಿ ಈ ರೀತಿಯಾಗಿರಬೇಕೆಂದು ಹೇಳುತ್ತಾರೆ. ಮಹಾರಾಜ ತರಹ ಕುಳಿತುಕೊಂಡಿರತಕ್ಕಂಥ ಅಧಿಕಾರಿಗಳ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ? What action you are going to take? ನಿರ್ಮಲನಗರವನ್ನು ಇಟ್ಟುಕೊಂಡು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಈ ರೀತಿಯಾದಂಥವುಗಳೆಲ್ಲವೂ ಇವತ್ತಿನ ದಿವಸ ಇವೆ. ನನ್ನ ಮೂರನೇ ಪ್ರಶ್ನೆ ಏನೆಂದರೆ, "The funds required for construction of UGD in the said city; when it would be released?" ಸರ್ವೆ ಕಾರ್ಯವೆಲ್ಲಾ ಮುಗಿದ ಮೇಲೆ ಅದರ ಅಂದಾಜು ವೆಚ್ಚ ಎಷ್ಟು ಆಗುತ್ತದೆ ಎಂಬುದು ತಿಳಿಯುತ್ತದೆಂದು ಹೇಳಿದ್ದೀರಿ. ಆದ್ದರಿಂದ, ಇದರ ಬಗ್ಗೆ ತಾವು ಏನು ಹೇಳುತ್ತೀರಿ?

ಶ್ರೀ ಎಂ.ಪಿ.ಪ್ರಕಾಶ್(ಗೃಹ ಮತ್ತು ಕಾನೂನು ಸಂಸದೀಯ ಇಲಾಖೆ ಸಚಿವರು (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ನಿಜವಾಗಿಯೂ ಕೂಡ ಒಳ್ಳೆಯ ಮೂಲಭೂತವಾದಂಥ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. 2001ರ ಜನಗಣತಿ ಪ್ರಕಾರ 1,41,294

ಜನಸಂಖ್ಯೆ ಇರತಕ್ಕಂಥ ಪ್ರದೇಶ. ಪ್ರತಿ ವರ್ಷ 2 ಪರ್ಸೆಂಟ್‌ನಷ್ಟು ಜನಸಂಖ್ಯೆಯನ್ನು ಹಚ್ಚಿ ಮಾಡುತ್ತಾ ಹೋದರೆ, ಅದು ಈಗ ಸುಮಾರು 2 ಲಕ್ಷ ಹತ್ತಿರ ಬರುತ್ತದೆ. 2004ರಲ್ಲಿ ಸರ್ವೆ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ 9 ಲಕ್ಷ ರೂಪಾಯಿಗಳ ಒಂದು ಅಂದಾಜು ವೆಚ್ಚವನ್ನು ತಯಾರು ಮಾಡಿದ್ದಾರೆ. ಅಲ್ಲಿರತಕ್ಕಂಥ ಕೆಜಿಎಫ್ ನಗರಸಭೆಯವರು ಸರ್ವೆ ಮಾಡುವಂಥ ಮೊತ್ತವಾದ 9 ಲಕ್ಷ ರೂಪಾಯಿಯನ್ನು ಅವರು ಠೇವಣಾತಿ ಇಡಬೇಕಾಗಿತ್ತು. ಆದರೆ, ಅವರು ಇಲ್ಲಿಯವರೆಗೆ ಠೇವಣಾತಿಯನ್ನು ಇಟ್ಟಿಲ್ಲ. ಠೇವಣಾತಿ ಇಡಬೇಕಾಗಿರತಕ್ಕಂಥ ಕೆಲಸವನ್ನು ಅವರು ಮಾಡದೇ ಇರುವುದರಿಂದ ಡಿಲೇ ಆಗಿದೆ. ನಾವು ಅವರಿಗೆ ಕೆಲವು ಸಲ ಅನುದಾನವನ್ನು ಬಿಡುಗಡೆ ಮಾಡುತ್ತೇವೆ. ಇದರ ಬಗ್ಗೆ ನೆನ್ನೆದಿವಸ ಬ್ರೀಫ್ ಮಾಡತಕ್ಕಂಥ ಸಂದರ್ಭದಲ್ಲಿ ನಾನು ಹೇಳಿದ್ದು, ಎಸ್‌ಎಸ್‌ಸಿ ಗೆ ನಾವು ಕೊಡತಕ್ಕಂಥ ಹಣದಲ್ಲಿ ಈ ಹಣವನ್ನು ಅಂದರೆ 9 ಲಕ್ಷ ರೂಪಾಯಿಗಳನ್ನು ಅದರಲ್ಲಿ ಮುರಿದುಕೊಂಡು ಈ 9 ಲಕ್ಷ ರೂಪಾಯಿಗಳನ್ನು ಸರ್ವೆ ಕೆಲಸ ಮಾಡುವುದಕ್ಕೆ ಹಣ ಕೊಡಿಸಿ ಎನ್ನತಕ್ಕಂಥ ಮಾತನ್ನು ಹೇಳಿದ್ದೇವೆ. ಸುಮಾರು ಎರಡು ವರ್ಷಗಳಿಂದ ಕೇವಲ ಒಂದು ತಾಂತ್ರಿಕ ಕಾರಣದಿಂದ ನಿಂತುಕೊಂಡಿರತಕ್ಕಂಥದ್ದು ಅಕ್ಷಮ್ಯ ಅಪರಾಧವೆಂದು ನಾನು, ಭಾವಿಸಿಕೊಂಡಿದ್ದೇನೆ. 100 ವಿದ್ಯುತ್ ಪಂಪ್‌ಗಳನ್ನು ಅಳವಡಿಸಿ 100 ಲೀಟರ್ ನೀರು ಕೊಡತಕ್ಕಂಥದ್ದನ್ನು ಬಿಜಿಎಂಎಲ್ ಪ್ರದೇಶದಲ್ಲಿ ಮಾಡಿದ್ದರು. ಮತ್ತೆ ಕೆಜಿಎಫ್ ನಗರಕ್ಕೂ ಕೂಡ ಕೊಡುತ್ತಿದ್ದರು. ಕೋಲಾರ ಜಿಲ್ಲೆಯಲ್ಲಿ ನಾಲ್ಕೈದು ವಷಗಳಿಂದ ಮಳೆ ಆಗದೇ ಇರುವುದರಿಂದ ಅಲ್ಲಿರತಕ್ಕಂಥ ಬೋರ್‌ವೆಲ್‌ಗಳಲ್ಲಿ ಸರಿಯಾದಂಥ ನೀರು ಬರುತ್ತಿಲ್ಲ. ಈಗ ತತ್‌ಕ್ಷಣ ನಗರ ಸಭೆಯಿಂದ ಬರತಕ್ಕಂಥ 9 ಲಕ್ಷ ರೂಪಾಯಿಗಳನ್ನು ಸರ್ಕಾರದಿಂದ ಕೊಡತಕ್ಕಂಥ ಹಣದಲ್ಲಿ ಹಿಡಿದುಕೊಂಡು ಆ ಸರ್ವೆ ಕೆಲಸವನ್ನು ಬೇಗ ಮುಗಿಸಿ ಸದರಿ ಕೆಲಸವನ್ನು ಬೇಗ ಪ್ರಾರಂಭ ಮಾಡುವುದಕ್ಕೆ ಆದೇಶ ಕೊಡುತ್ತೇವೆ.

ಶ್ರೀ ಎಸ್. ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ಕಳೆದ ಎರಡು ವರ್ಷಗಳಿಂದ ಇದರ ಬಗ್ಗೆ ಏನೂ ಮಾಡಿಲ್ಲವೆಂದರೆ it shows the inefficiency of the municipality. ಅಲ್ಲಿರತಕ್ಕಂಥ ಕಮೀಷನರ್‌ರವರು ಪ್ರೆವೈಟ್‌ನವರಲ್ಲ. ಸರ್ಕಾರದ ರೆಪ್ರೆಸೆಂಟೆಟೀವ್ ಆಗಿದ್ದಾರೆ. ಸರ್ಕಾರದ ಗಮನಕ್ಕೂ ತಂದರೂ ಕೂಡ ಇವರು ಕೆಲಸ ಮಾಡುವುದಿಲ್ಲ. ಮತ್ತೆ ಅವರು ಇನ್ ಎಫಿಶಿಯೆಂಟ್ ಇದ್ದಾರೆಂದರೂ ಕೂಡ ಅವರ ಮೇಲೆ ಏನೂ ಕ್ರಮ ತೆಗೆದುಕೊಳ್ಳುವುದಿಲ್ಲ. ಯಾವ ರೀತಿಯಾಗಿದೆ ಎಂದರೆ, They have colluded with the fraud people who are doing all mischief. Most inefficient Commissioner and officers are there. ಈ ವಿಷಯವನ್ನು ಸುಮಾರು ಸಾರಿ ಸರ್ಕಾರದ ಗಮನಕ್ಕೆ ತೆಗೆದುಕೊಂಡು ಬಂದಿದ್ದೇನೆ. 9 ಲಕ್ಷ ರೂಪಾಯಿಗಳನ್ನು ಎರಡು ವರ್ಷಗಳಿಂದ ಕೊಡುವುದಕ್ಕೆ ಆ ನಗರಸಭೆಗೆ ಯೋಗ್ಯತೆ ಇಲ್ಲವೆಂದರೆ ಅಲ್ಲಿರತಕ್ಕಂಥವರು ಏನು ಕೆಲಸ ಮಾಡಿಕೊಂಡಿದ್ದಾರೆ ಎಂಬುದನ್ನು ತಾವೇ ಹೇಳಿ? Most ineficient officers are there ಎಂದು ಈ ಸಭೆಯಲ್ಲಿ ನಾನು ಸುಮಾರು ಸಾರಿ ಹೇಳಿದ್ದೇನೆ. ಅವರು ಕೆಲಸವನ್ನೂ ಕೂಡ ಮಾಡುವುದಿಲ್ಲವೆಂದು ಸಹ ಹೇಳಿದ್ದೇನೆ. ಜನರು ಯಾರನ್ನು ಕೇಳುತ್ತಾರೆ?

ನಗರಸಭೆ ಕಮೀಷನರ್‌ರವರನ್ನು ಯಾರೂ ಕೇಳುವುದಿಲ್ಲ? ನಮ್ಮ ಶಾಸಕರು ಸರಿಯಾಗಿಲ್ಲವೆಂದು ನಮ್ಮನ್ನೂ ಉಗಿಯುತ್ತಾರೆ. I have brought it to the notice of higher officers. Inspite of this they have not taken action. ಆದರೆ, ಏನು ಹೇಳುತ್ತಾರೆಂದರೆ, ರಿಸರ್ವೇಶನ್ ಕಾನ್‌ಸ್ಟಿಟುಯೆನ್ಸಿಗೆಲ್ಲಾ ಹಣವನ್ನು ಪಂಪ್ ಮಾಡುತ್ತೇವೆಂದು ಹೇಳುತ್ತಾರೆ. ಎಲ್ಲಿಗೆ ಪಂಪ್ ಮಾಡುತ್ತಿದ್ದೀರಿ? ಗಾಳಿಗೇನಾದರೂ ಪಂಪ್ ಮಾಡುತ್ತೀರಾ? ಇದೂ ಕೂಡ ಇಲ್ಲ. ಇದರ ಬಗ್ಗೆ ನಾನು ಬಹಳ ಪತ್ರ ಬರೆದಿದ್ದೇನೆ. ಮತ್ತೆ ಡೈರೆಕ್ಟರ್ ಹಾಗೂ ಸೆಕ್ರೆಟರಿ ಗಮನಕ್ಕೂ ಕೂಡ ತೆಗೆದುಕೊಂಡು ಬಂದಿದ್ದೇನೆ. ಒಂದು ನಗರ ಸಭೆ ಕೇವಲ 9 ಲಕ್ಷ ರೂಪಾಯಿ ಕೊಡುವುದಕ್ಕೆ ಆಗಿಲ್ಲ. It is not a rural area. It is a city. ಬಿಜಿಎಂಎಲ್ ನವರು ಸುಮಾರು 60 ಲಕ್ಷ ರೂಪಾಯಿಗಳಷ್ಟು ಟ್ಯಾಕ್ಸ್ ಕೊಡುತ್ತಾರೆ. ಈ ಹಣದಿಂದ ಬೇಕಾದರೂ ಇದಕ್ಕೆ 9 ಲಕ್ಷ ರೂಪಾಯಿ ಒದಗಿಸಬಹುದು. ಆದರೆ, ಅವರು ಆ ರೀತಿಯಾಗಿ ಮಾಡುತ್ತಿಲ್ಲ. ಅವರಿಗೆ ಕೋಟಿ ರೂಪಾಯಿ ಕೊಟ್ಟರೆ ಹಳೆಯ ಬಿಲ್‌ಗಳನ್ನು ಪ್ರಿಪೇರ್ ಮಾಡಿಕೊಂಡು ಅದಕ್ಕೆ ಪೇಮೆಂಟ್ ಮಾಡುತ್ತಾರೆ. ಆದರೆ ಕೆಲಸ ಮಾಡುವುದಿಲ್ಲ. ಇವೆಲ್ಲವನ್ನೂ ಯಾರು ಚೆಕ್ ಮಾಡುತ್ತಾರೆ? ಆದರೆ ನಾನು ಇವೆಲ್ಲವನ್ನೂ ಚೆಕ್ ಮಾಡಿ ಮಾಹಿತಿಯೆಲ್ಲವನ್ನೂ ತೆಗೆದುಕೊಂಡು ಬಂದು ಕೊಟ್ಟಿದ್ದರೂ ಕೂಡ your government officers have failed to do their duty. ಎಂದು ತಮ್ಮ ಮುಖಾಂತರ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ಯುಜಿಡಿ ಸ್ಕೀಂಗೆ ಸಂಬಂಧಪಟ್ಟಂತೆ ಒಂದು ಕ್ಲಾರಿಫಿಕೇಶನ್.

ಅಧ್ಯಕ್ಷರು: ಆ ವಿಷಯ ಕೇವಲ ಕೆಜಿಎಫ್ ಗೆ ಸಂಬಂಧಪಟ್ಟಿರತಕ್ಕಂಥದ್ದು, ನೀವೇಕೆ ಸುಮ್ಮನೆ ಮಧ್ಯದಲ್ಲಿ ಭಾಗವಹಿಸುತ್ತೀರಿ?

ಶ್ರೀ ಎಸ್.ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾಹಿತಿಯನ್ನು ಕೊಡುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ನೀರಿನ ಲಭ್ಯತೆ ನೋಡಿಕೊಂಡು ಯುಜಿಡಿ ಸ್ಕೀಂನ್ನು ಮಾಡಲಾಗುತ್ತದೆ. ಅಂದರೆ, ನಿಗದಿ ಮಾಡಿರತಕ್ಕಂಥ ಪಟ್ಟಣಕ್ಕೆ ನೀರು ಎಷ್ಟು ಪ್ರಮಾಣದಲ್ಲಿ ಸಿಗುತ್ತದೆ ಎಂಬುದನ್ನು ನೋಡಲಾಗುತ್ತದೆ. ಆದರೆ, 100 ಲೀಟರ್ ನೀರು ಅಲ್ಲಿ ಲಭ್ಯತೆಯಿಲ್ಲವೆಂಬುದು ತಾವೇ ಹೇಳಿದ್ದೀರಿ. ಮತ್ತೆ ಬೋರ್‌ವೆಲ್ ಆಧಾರದ ಮೇಲೆ ಕುಡಿಯುವ ನೀರಿನ ಒಂದು ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ತಾವು ಹೇಳಿದ್ದೀರಿ. ನೀರಿನ ಲಭ್ಯತೆ ಇದ್ದರೆ ಮಾತ್ರ ಯುಜಿಡಿ ಸ್ಕೀಂಗೆ ಸರ್ವೆ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಹೊರತು ಇಲ್ಲದಿದ್ದರೆ ಆಗುವುದಿಲ್ಲ. ಯುಜಿಡಿ ಸ್ಕೀಂಗೆ ಅನುಮತಿ ಪಡೆದುಕೊಳ್ಳುವುದಕ್ಕೋಸ್ಕರ ಕೇಂದ್ರ ಸರ್ಕಾರಕ್ಕೆ ಅಲ್ಲಿಮೇಟ್ ತಾವು ಕಳುಹಿಸಿಕೊಡುತ್ತೀರಿ. ನೀವು ಯುಜಿಡಿ ಸ್ಕೀಂ ಮಾಡಬೇಕಾದರೆ ನೀವು ಹೇಳಿದಂತೆ ಪ್ರತಿದಿನ 125 ಲೀಟರ್ ನೀರಿನ ಅವಶ್ಯಕತೆ ಇದೆ ಎಂದು ಹೇಳಿದ್ದೀರಿ. ಆದ್ದರಿಂದ ಇಷ್ಟು ವಾಟರ್ ಸಿಗುತ್ತದೆಯೇ ಎಂಬುದರ ಮೇಲೆ ಯುಜಿಡಿ ಸ್ಕೀಂ ಬರುತ್ತದೆ ಹೊರತು ಇಲ್ಲದಿದ್ದರೆ ಬರುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಆ ಎಲ್ಲಾ ವಿಚಾರಗಳನ್ನು ತಾಂತ್ರಿಕವಾಗಿ ಪರಿಶೀಲಿಸಿ ಈ ಒಂದು ಯೋಜನೆಯನ್ನು ರೂಪಿಸಿ ಮತ್ತು ನೀರಿನ ಲಭ್ಯತೆಯನ್ನೂ ಸಹ ಕಂಡುಹಿಡಿಯಲಾಗಿದೆ. ಕೋಲಾರ ಜಿಲ್ಲೆಯ ಎಲ್ಲಾ ಕಡೆ ಯಾವುದೇ ನದಿ ನೀರನ್ನು ತರುವುದಕ್ಕೆ ಸಾಧ್ಯವಾಗುವುದಿಲ್ಲ. ಅಲ್ಲಿ ಬೇಕಾದಷ್ಟು ಕರೆಗಳಿವೆ. ಬೇತಮಂಗಲ ಕೆರೆಯಿಂದ ಕೂಡ ಬೇಕಾದಷ್ಟು ಅನುಕೂಲತೆಗಳನ್ನು ಮಾಡಿಕೊಡಲಾಗಿದೆ. ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಅವರು 9 ಲಕ್ಷ ರೂಪಾಯಿ ಕಟ್ಟಿದ್ದು ಒಂದೇ ಅಲ್ಲ, ಕೆಜಿಎಫ್‌ನಲ್ಲಿ ಇದಕ್ಕೆ ಸಂಬಂಧಪಟ್ಟಂಥ ನಗರಸಭೆಯವರೂ ಇದರ ಬಗ್ಗೆ ಒಂದು ಗೊತ್ತುವಳಿ ಕೂಡ ಮಾಡಿದ್ದಾರೆ. ಮತ್ತೆ ಈ ಗೊತ್ತುವಳಿಯನ್ನು ಪಾಸ್ ಮಾಡಬೇಕೆಂದು ಅನೇಕ ಪತ್ರಗಳನ್ನು ಬರದಿದ್ದಾರೆ. ಆದರೂ ಕೂಡ ಅವರು ಗೊತ್ತುವಳಿಯನ್ನು ಪಾಸ್ ಮಾಡಿಲ್ಲ ಏನು ಉದ್ದೇಶ ಎನ್ನತಕ್ಕಂಥದ್ದು ಗೊತ್ತಿಲ್ಲ. ತಾವು ಹೇಳಿರತಕ್ಕಂಥ ಅನೇಕ ವಿಷಯಗಳ ಬಗ್ಗೆ ಅನಂತರ ನಮ್ಮ ಕಾರ್ಯದರ್ಶಿಯವರಿಗೆ ತಿಳಿಸುತ್ತೇನೆ. ತತ್‌ಕ್ಷಣದಲ್ಲಿಯೇ ಅಲ್ಲಿಗೆ ಒಬ್ಬ ಹಿರಿಯ ಅಧಿಕಾರಿಯನ್ನು ಕಳುಹಿಸಿ ಕೆಜಿಎಫ್ ನಗರಸಭೆಯಲ್ಲಿ ನಡೆದಿರತಕ್ಕಂಥ ಎಲ್ಲ ಅವ್ಯವಹಾರದ ಬಗ್ಗೆ ತನಿಖೆ ನಡೆಸಿ ಒಂದು ವಾರದೊಳಗೆ ವರದಿ ಕೊಡುವಂತೆ ನಾನು ಅಧಿಕಾರಿಗಳಿಗೆ ಹೇಳುತ್ತೇನೆ.

ಶ್ರೀ ಎಸ್.ರಾಜೇಂದ್ರನ್: ಮಾನ್ಯ ಅಧ್ಯಕ್ಷರೆ, ಇದನ್ನು ಡಿಸಾಲ್ವ್ ಮಾಡಬೇಕೆಂದು ಹೇಳಿದ್ದಾರೆ. ಆದ್ದರಿಂದ ಅದರ ಮೇಲೆ ಕ್ರಮ ತೆಗೆದುಕೊಂಡರೆ ಸಾಕು.

ಶ್ರೀ ಎಂ.ಪಿ.ಪ್ರಕಾಶ್: ಹಾಗಾದರೆ, ಇದರ ಬಗ್ಗೆ ನಮ್ಮ ಕಾರ್ಯದರ್ಶಿಯವರಿಗೆ ತಿಳಿಸಿ, ಅದು ಎಲ್ಲಿ ಮತ್ತು ಯಾವ ಹಂತದಲ್ಲಿದೆ ಎಂಬುದನ್ನು ತಿಳಿದುಕೊಳ್ಳುತ್ತೇವೆ. ಈಗ 9 ಲಕ್ಷ ರೂಪಾಯಿ ಕೊಡತಕ್ಕಂಥದರ ಬಗ್ಗೆ ಒಂದು ಗೊತ್ತುವಳಿ ಆಗತಕ್ಕಂಥ ಕೆಲಸ ದಯಮಾಡಿ ಆಗಬೇಕಾಗಿದೆ. ಇದನ್ನು ನಾವು ಮಾಡುವುದಕ್ಕೆ ಬರುವುದಿಲ್ಲ. ಆದ್ದರಿಂದ ಇದನ್ನು ಮಾಡಿಸತಕ್ಕಂಥ ಪ್ರಯತ್ನವನ್ನೂ ಕೂಡ ನಾವು ಮಾಡುತ್ತೇವೆ ಎನ್ನತಕ್ಕಂಥದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎಂ.ಪಿ.ಪ್ರಕಾಶ್(ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಂಗಳವಾರ ದಿನಾಂಕ: 27ನೇ ಜೂನ್ 2006ರಂದು 10ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 53 ಪ್ರಶ್ನೆಗಳ ಪೈಕಿ 50 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. (ಅನುಬಂದ–1)

ಅಧ್ಯಕ್ಷರು ಮಂಡಿಸಲಾಯಿತು.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

(1) ಶ್ರೀ ಎಂ.ಪಿ.ಪ್ರಕಾಶ್: ಗೃಹ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೇ,

2005ರ ಮಾಹಿತ ಹಕ್ಕು ಅಧಿನಿಯಮ 24(5)ರ ಪ್ರಕರಣದ ಮೇರೆಗೆ: